ಆಗಿ ಆ ಹಾಸ್ಟಲ್‌ನಲ್ಲಿಯೇ ಸೇವಿಂಗ್ಸ್ ಆಗುತ್ತಿದೆ. ಯಾವ ಮಕ್ಕಳೂ ಮಧ್ಯಾಹ್ನದ ಊಟ ಮಾಡುತ್ತಾ ಇಲ್ಲ. ಏಕೆಂದರೆ, ಅವರೆಲ್ಲಾ ಸ್ಕೂಲಿನಲ್ಲಿ ಊಟ ಮಾಡುತ್ತಿದ್ದಾರೆ. ಶನಿವಾರ, ಭಾನುವಾರ ಮಾತ್ರ ಅಲ್ಲಿ ಊಟ ಮಾಡುತ್ತಾರೆ. ಉಳಿದಂತೆ ಐದು ದಿವಸವೂ ಮಕ್ಕಳು ಸ್ಕೂಲಿನಲ್ಲಿ ಊಟ ಮಾಡುತ್ತಾರೆ. ಆ ದುಡ್ಡು ಸೇವಿಂಗ್ಸ್ ಆಗುತ್ತದೆಯಲ್ಲಾ, ಅದಕ್ಕೋಸ್ಕರ 5 ಅಥವಾ 10 ಸೀಟುಗಳನ್ನು ಹಾಸ್ಟಲುಗಳಿಗೆ ಜಾಸ್ತಿ ಕೊಡಿ ಎಂದು ಕೇಳುತ್ತಾ ಇರುವುದು.

ಶ್ರೀ ಎ. ಕೃಷ್ಣಪ್ಪ : ಅವರೇನು ಹೇಳುತ್ತಿದ್ದಾರೆ, ಆ ಸುದ್ದಿ ನನಗೆ ಸುದ್ದಿಯಾಗುತ್ತದೆ ಅಷ್ಟೆ. ಸರ್ಕಾರ ಅದರ ಮೇಲೆ ಯಾವ ಪಾಲಿಸಿ ಡಿಸಿಷನ್ ತೆಗೆದುಕೊಂಡು ಮಧ್ಯಾಹ್ನ ಹಾಸ್ಟಲ್ ಮಕ್ಕಳಿಗೆ ಊಟ ಹಾಕಬೇಡಿ, ಅಲ್ಲಿಯೇ ಊಟ ಮಾಡಿ ಎಂದು ನಾವು ನಿರ್ದೇಶನ ಕೊಟ್ಟಿಲ್ಲ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಹಾಸ್ಟಲ್ ಹುಡುಗರು ಮಧ್ಯಾಹ್ನ ಸ್ಕೂಲಿನಲ್ಲಿ ಊಟ ಮಾಡಬಾರದೇ?

ಶ್ರೀ ಎ. ಕೃಷ್ಣಪ್ಪ : ನಾವು ಇದಕ್ಕೆ ನಿರ್ದೇಶನಗಳನ್ನು, ಸೂಚನೆಗಳನ್ನು ಖಂಡಿತ ಕೊಟ್ಟಿಲ್ಲ. ಅಕಸ್ಮಾತ್ತಾಗಿ ಅದನ್ನು ಡೀವಿಯೇಟ್ ಮಾಡಿ, ಯಾವುದಾದರೂ ಹಾಸ್ಟಲಿನಲ್ಲಿ ಮಕ್ಕಳಿಗೆ ಮಧ್ಯಾಹ್ನ ಊಟವನ್ನು ಸರ್ವ್ ಮಾಡದೇ, ಅಲ್ಲೇ ನೀವು ಮಿಡ್ಡೇಮಿಲ್‌ನಲ್ಲಿ ತಿಂದುಬಿಟ್ಟು ಬನ್ನಿ ಎಂದು ತೀರ್ಮಾನ ಯಾರಾದರೂ ಮಾಡಿದ್ದರೆ, ಅದು ಅವರ ತೀರ್ಮಾನವಾಗುತ್ತದೆಯೇ ಹೊರತು ಸರ್ಕಾರದ ತೀರ್ಮಾನ ಅಲ್ಲ. ಅಂತಹ ಪ್ರಕರಣಗಳನ್ನು ನನ್ನ ಗಮನಕ್ಕೆ ಕೊಟ್ಟರೆ, ನಾನು ಖಂಡಿತ ಕ್ರಮ ತೆಗೆದುಕೊಳ್ಳುತ್ತೇನೆ. That is not the choice of the Government.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಮಿಡ್ಡೇಮಿನಲ್ಲಿಯೂ ಮಕ್ಕಳ ಲೆಕ್ಕ ತೋರಿಸಿ ದುಡ್ಡು ತೆಗೆದುಕೊಳ್ಳುತ್ತಿದ್ದಾರೆ, ಇಲ್ಲಿ ಹಾಸ್ಟಲಿನಲ್ಲಿಯೂ ದುಡ್ಡು ತೆಗೆದುಕೊಳ್ಳುತ್ತಿದ್ದಾರೆ, ಇಲ್ಲಿ ಹಾಸ್ಟಲಿನಲ್ಲಿಯೂ ದುಡ್ಡು ತೆಗೆದುಕೊಳ್ಳುತ್ತಿದ್ದಾರೆ. ಎರಡು ಎಕ್ಸ್‌ಪೆಂಡೀಚರ್ ಆಗುತ್ತಾ ಇದೆ. ಸರ್ಕಾರದವರು ಸೂಚನೆಯನ್ನು ಕೊಡಬೇಕಾಗುತ್ತದೆ. ಹಾಸ್ಟಲು ಹುಡುಗರಿಗೆ ಮಿಡ್ಡೇಮೀಲ್ ಇಲ್ಲವೆಂದು ಹೇಳಿ, ಇಲ್ಲವೇ ಮಿಡ್ಡೇಮೀಲ್ ಮಾಡುವುದರಿಂದ, ಹಾಸ್ಟಲಿನಲ್ಲಿ ಮಧ್ಯಾಹ್ನ ಅಡಿಗೆ ಮಾಡಬೇಡಿ ಎಂದು ಹೇಳಿ. ಎರಡೂ ಕಡೆಯಲ್ಲಿ ದುಡ್ಡು ತೆಗೆದುಕೊಂಡು ತಿನ್ನತಕ್ಕಂಥಾದ್ದಕ್ಕೆ ಅವಕಾಶ ಮಾಡಿಕೊಡಬಾರದು.

ಉಪಾಧ್ಯಕ್ಷರು : ಸರ್ಕಾರದ ಆದೇಶ ಇಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಆದೇಶ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿರುವುದು. ಎರಡು ಕಡೆಯಲ್ಲೂ ಏಕೆ ಎಕ್ಸ್‌ಪೆಂಡೀಚರ್ ತೋರಿಸಬೇಕು? ಮಿಡ್ಡೇಮೀಲ್ ಮಾಡಲಿ ಇಲ್ಲವೇ ಹಾಸ್ಟಲಿನಲ್ಲಿ ಊಟ ಹಾಕಲಿ.

ಶ್ರೀ ಎ. ಕೃಷ್ಣಪ್ಪ : ಬಿಸಿಯೂಟ ಕೊಡತಕ್ಕ ಕಾರ್ಯಕ್ರಮವನ್ನು ಸರ್ಕಾರ ಘೋಷಣೆ ಮಾಡಿರುವುದು 1 ರಿಂದ 5ನೇ ತರಗತಿ ಮಕ್ಕಳಿಗೆ. ಆದರೆ, ಹಾಸ್ಟಲುಗಳಲ್ಲಿ ಇರತಕ್ಕ ವಿದ್ಯಾರ್ಥಿಗಳು 5ನೇ ತರಗತಿಯಿಂದ ಮೇಲೆ ಹೀಗಿದ್ದಾಗ, ಈ ಪ್ರಶ್ನೆ ಉದ್ಭವವೇ ಆಗುವುದಿಲ್ಲ.

ಉಡುಪಿ ಜಿಲ್ಲೆಯಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳನ್ನು ಪ್ರಾರಂಭಿಸುವುದು

390 (3482) : **ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ)** : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಎಷ್ಟು ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳನ್ನು ಪ್ರಾರಂಭಿಸಲು ಸ್ಥಳಗಳನ್ನು ಗುರುತಿಸಲಾಗಿದೆ;

ಆ) ಗುರುತಿಸಲಾದ ಸ್ಥಳ, ಕೈಗಾರಿಕೆ ವಿವರ, ಕೈಗಾರಿಕೆ ಪ್ರಾರಂಭಿಸುವ ಕಂಪೆನಿ ಅಥವಾ ಸರ್ಕಾರ ಸ್ವಾಮ್ಯದ ವಿವರ ಹಾಗೂ ಪ್ರಾರಂಭಿಸಲಾಗುವ ವರ್ಷದ ಮಾಹಿತಿಯನ್ನು ನೀಡುವುದು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಮಾರ್ಚ್ 2003ರಂದು ನಡೆದ ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಮೇಕೋಸ್ಟಲ್ ಹಾಲ್ಕೋಹಾಲ್ ಪ್ರೈ ಲಿಮಿಟೆಡ್ ಇವರ ಇಂಧನ ಗ್ರೇಡ್ ಎಥನಾಲ್ ತಯಾರಿಸುವ ಘಟಕವನ್ನು ಉಡುಪಿ ಜಿಲ್ಲೆಯಲ್ಲಿ ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ. ಈ ಕಂಪೆನಿಯು ಒಟ್ಟು 15.66 ಕೋಟಿ ಬಂಡವಾಳ ಹೂಡಲು ಉದ್ದೇಶಿಸಿರುತ್ತಾರೆ. ಕರ್ನಾಟಕ ಸರ್ಕಾರದ ಹೊಸ ಕೈಗಾರಿಕಾ ನೀತಿ 2001-02ರ ಪ್ರಕಾರ ಉಡುಪಿ ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪಿಸಲು ಮುಂದೆ ಬರುವ ಎಲ್ಲಾ ಕೈಗಾರಿಕೋದ್ಯಮಿಗಳಿಗೂ ರಿಯಾಯಿತಿ ಮತ್ತು ಪ್ರೋತ್ಸಾಹ ಸೌಲಭ್ಯಗಳನ್ನು ನೀಡಲಾಗುವುದು.

ಆ) ಕರ್ನಾಟಕ ಸರ್ಕಾರವು ಕರಾವಳಿ ವಿಶೇಷ ಆರ್ಥಿಕ ವಲಯವನ್ನು ಸ್ಥಾಪಿಸಲು ಯೋಜನೆಯನ್ನು ಹಮ್ಮಿಕೊಂಡಿದ್ದು ಇದನ್ನು ಕರಾವಳಿ ತೀರದ 3 ಸ್ಥಳಗಳಲ್ಲಿ ಅಂದರೆ ಮಂಗಳೂರು (ದಕ್ಷಿಣ ಕನ್ನಡ ಜಿಲ್ಲೆ) ಪಡುಬಿದ್ರಿ (ಉಡುಪಿ ಜಿಲ್ಲೆ) ಅಗಸೂರು (ಉತ್ತರ ಕನ್ನಡ ಜಿಲ್ಲೆ) ಎಂದು ಗುರುತಿಸಲಾಗಿದೆ. ಉಡುಪಿ ಜಿಲ್ಲೆಯ ಪಡುಬಿದ್ರಿಯಲ್ಲಿ ಈ ಯೋಜನೆಯಡಿಯಲ್ಲಿ 2000 ಎಕರೆ ಗುರುತಿಸಿದ್ದು ರೂ. 940 ಕೋಟಿ ಬಂಡವಾಳ ಖಾಸಗೀ ವಲಯದಲ್ಲಿ ಹೂಡಲು ಯೋಜಿಸಲಾಗಿದೆ. ಈ ಯೋಜನೆಗೆ ಕೇಂದ್ರ ಸರ್ಕಾರದ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಹಾಗೂ ಕೇಂದ್ರ ಸರ್ಕಾರದಿಂದ ಅನುಮೋದನೆ ನಿರೀಕ್ಷಿಸಲಾಗಿದೆ.

ಕೇಂದ್ರ ಸರ್ಕಾರದಿಂದ ಅನುಮೋದನೆ ಬಂದ ನಂತರ ಕ್ಷೇತ್ರದ ಹೂಡಿಕೆದಾರರನ್ನು ಗುರುತಿಸಿ ಕರಾವಳಿ ವಿಶೇಷ ವಲಯ ಯೋಜನೆಯನ್ನು ಪಡುಬಿದ್ರಿ ಉಡುಪಿ ಜಿಲ್ಲೆಯಲ್ಲಿ ಕಾರ್ಯಗತಗೊಳಿಸಲಾಗುವುದು.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಮಾನ್ಯ ಉಪಾಧ್ಯಕ್ಷರೇ, ಉಡುಪಿ ಜಿಲ್ಲೆಯಲ್ಲಿ ಯಾವುದೇ ಕೈಗಾರಿಕೆಗಳು ಅಭಿವೃದ್ಧಿ ಹೊಂದುತ್ತಾ ಇಲ್ಲ. ಹೆಂಚಿನ ಉದ್ಯಮ ಉಂಟು, ಈ ಉದ್ಯಮದವರೂ ಕೂಡ ತುಂಬಾ ಸಂಕಷ್ಟದಲ್ಲಿದ್ದಾರೆ. ಹಾಗೆಯೇ ಸಹಕಾರಿ ಕ್ಷೇತ್ರದಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ, ಅದೂ ಕೂಡ ಒಳ್ಳೆಯ ರೀತಿಯಲ್ಲಿ ನಡೆಯುತ್ತಾ ಇಲ್ಲ; ಸಮಸ್ಯೆಯಲ್ಲಿಯೇ ಇದೆ, ರೈತರಿಗೆ ಹಣ ಸಿಗಲಿಲ್ಲ. ನಮ್ಮಲ್ಲಿ ತುಂಬಾ ಜನ ವಿದ್ಯಾವಂತರಿದ್ದಾರೆ, ವೃತ್ತಿಪರ ತರಬೇತಿ ಪಡೆದವರಿದ್ದಾರೆ, ಆದರೆ ಉದ್ಯೋಗವೇ ಸಿಗುತ್ತಾ ಇಲ್ಲ. ಇಷ್ಟರವರೆಗೆ ಉಡುಪಿ ಜಿಲ್ಲೆಯ ಮಟ್ಟಿಗೆ ಏನೂ ಮಾಡಲಿಲ್ಲ. ನಾವು ಕೇಳಿದರೆ, ಪರಿಸರ ಇಲಾಖೆಯವರಿಂದ ತೊಂದರೆ ಬರುತ್ತದೆಂದು ಹೇಳುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷರೆ, ಯಾವ ಕೈಗಾರಿಕೆಗಳು ಪ್ರಾರಂಭವಾಗಿವೆಯೆಂದು ನನ್ನ ಉತ್ತರದಲ್ಲಿ ಹೇಳಿದ್ದೇನೆ. ಅವರು ಹೇಳಿದ್ದು ನಿಜ. ಉಡುಪಿ ಜಿಲ್ಲೆಯಲ್ಲಿ; ಮತ್ತು ಮಂಗಳೂರು ಜಿಲ್ಲೆಯಲ್ಲಿ ಯಾವ ಪ್ರಕಾರ ಕೈಗಾರಿಕೆಗಳು ಬರಬೇಕಾಗಿತ್ತೋ ಆ ಪ್ರಕಾರ

ಬರಲಿಲ್ಲ. ಆದರೆ, ಇವತ್ತಿನ ಈ ಉದಾರೀಕರಣ ನೀತಿಯಲ್ಲಿ ಸರ್ಕಾರ ಯಾವ ಕೈಗಾರಿಕೆಯನ್ನೂ ಪ್ರಾರಂಭ ಮಾಡುವುದಿಲ್ಲ. ಹಾಗಾಗಿ ಪ್ರೈವೇಟ್ ಸೆಕ್ಟಾರಿನವರು ಹೋಗಿ ಇನ್‌ವೆಸ್ಟ್‌ಮೆಂಟ್ ಮಾಡಬೇಕಾಗುತ್ತದೆ. ನಾವು ಮೂಲಭೂತ ಸೌಕರ್ಯಗಳನ್ನು ನಿರ್ಮಾಣ ಮಾಡಬೇಕು. ಕರಾವಳಿಯಲ್ಲಿ ಹೆಚ್ಚು ಕೈಗಾರಿಕೆಗಳು ಬರಬೇಕೆಂಬ ದೃಷ್ಟಿಯಿಂದ ವಿಶೇಷ ಆಸಕ್ತಿ ವಹಿಸಿದ್ದೇವೆ ಹಾಗೂ ಕೇಂದ್ರ ಸರ್ಕಾರದ ಪರಿಕಲ್ಪನೆ ಏನಿದೆ, ಅದನ್ನು ಜಾರಿಗೆ ತರಲಿಕ್ಕೆ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಇದು ಮಾಡಬೇಕು ಎಂಬ ಪ್ರಸ್ತಾವನೆಯನ್ನು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅವರ ನೀತಿ ಪ್ರಕಾರ, ಅನುಮೋದನೆ ಬಂದನಂತರ ಉಡುಪಿಯಲ್ಲೂ ಸಹ ಒಂದು ಸ್ಪೆಷಲ್ ಎಕನಾಮಿಕ್ ಜೋನ್ ಆಗುತ್ತದೆ. ಪಡುಬಿದ್ರೆಯಲ್ಲಿ ಭೂಮಿಯನ್ನು ಗುರುತಿಸಿದ್ದೇವೆ. ಅಷ್ಟೇ ಅಲ್ಲ, ಕರಾವಳಿಯ ಭಾಗದಲ್ಲಿ ಪ್ರವಾಸೋದ್ಯಮ, ಫುಡ್ ಪ್ರೋಸೆಸಿಂಗ್ ಇಂಡಸ್ಟ್ರೀಸ್, ಕ್ಯಾಷ್ಯೂ ಇಂಡಸ್ಟ್ರೀಸ್ ಬರಲಿಕ್ಕೆ ಸಾಕಷ್ಟು ಅವಕಾಶಗಳು ಇವೆ. ಆ ದೃಷ್ಟಿಯಿಂದ ನವೆಂಬರ್ ಅಥವಾ ಡಿಸೆಂಬರ್ 2003ರಲ್ಲಿ ಇನ್‌ವೆಸ್ಟರೇಮಿಟ್" ಈ ಕರಾವಳಿ ಜಿಲ್ಲೆಯ ಸಲುವಾಗಿ ಮಾಡುತ್ತಿದ್ದೇವೆ. ಹೆಂಚಿನ ಕಾರ್ಖಾನೆ ಬಗ್ಗೆ ತಾವು ಹೇಳಿದ್ದು ನಿಜ. ಅವರು ಬಹಳ ಕಷ್ಟದಲ್ಲಿದ್ದಾರೆ. ಆದರೆ, ಪ್ರಶ್ನೆ ಏನಿದೆಯೆಂದರೆ ಇವತ್ತು ಅವರಿಗೆ ಓವರ್ ಆಲ್ ಮಾರ್ಕೆಟ್ ಏನಿರಬೇಕೋ, ಆ ಮಾರ್ಕೆಟ್ ಇವತ್ತು ಇಲ್ಲ. ಎರಡನೆಯದು ಉರುವಲು ಕಟ್ಟಿಗೆ ಎಷ್ಟು ಸಾಧ್ಯವೋ ಅಷ್ಟು ನಾವು ಸಪ್ಲೈ ಮಾಡಿದ ದಿವಸ, ಅದರ ದರ ಹೆಚ್ಚಾಗಿ ಅವರ ಕಾಸ್ಟ್ ಮೇಲೆ ಎಫೆಕ್ಟ್ ಆಗಿದೆ. ಅವರೂ ಸಹ ಆಧುನೀಕರಣ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಬಗ್ಗೆ ಮಾನ್ಯ ಆಸ್ಕರ್ ಫರ್ನಾಂಡಿಸ್ ಹಾಗೂ ಮುಖ್ಯಮಂತ್ರಿಯವರು ಇತ್ತೀಚೆಗೆ ಒಂದು ಸಭೆ ಮಾಡಿದ್ದಾರೆ. ಅದಕ್ಕೊಂದು ಪರಿಹಾರ ಕಂಡುಹಿಡಿಯಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಈ ದೇಶದಲ್ಲಿ ಉದ್ಯಮಕ್ಕೆ ಎಲ್ಲಾ ಜಾಗಗಳನ್ನೂ ಗುರುತಿಸಿದ್ದಾರೆ. ಅದರಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯೂ ಒಂದು. ಇಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳೂ ಇವೆ. ಆದರೆ, ಉದ್ದಿಮೆ ಮಾಡಲಿಕ್ಕೆ ಸರ್ಕಾರ ಪ್ರೋತ್ಸಾಹ ಕೊಡಲಿಲ್ಲ; ಅದಕ್ಕೆ ಇಚ್ಛಾಶಕ್ತಿ ಇಲ್ಲ. ನಮ್ಮಲ್ಲಿ ವಿದ್ಯೆ ಕಲಿತು, ವೃತ್ತಿ ಶಿಕ್ಷಣ ಪಡೆದವರು ನಿರುದ್ಯೋಗಿಗಳಾಗಿ ಇದ್ದಾರೆ. ನಾವೇನು ಉದ್ಯೋಗಕ್ಕೋಸ್ಕರ ಹಾರೆ, ಪಿಕಾಸಿ, ಜೆ.ಸಿ.ಬಿ.ಗಳನ್ನು ಬದಿಗಿಟ್ಟು ಸ್ಟೂನ್‌ನಲ್ಲಿ ಮಣ್ಣು ಹಾಕಿ ಎಂದು ಹೇಳುವುದಕ್ಕಾಗುವುದಿಲ್ಲ. ಉದ್ಯಮಗಳು ಎಂದರೆ, ಅದರಲ್ಲಿ ಪ್ರೊಡಕ್ಷನ್ ಆಗಬೇಕು ಹಾಗೆಯೇ ನಿರುದ್ಯೋಗಿಗಳ ಕೈಗೆ ಕೆಲಸವನ್ನೂ ಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಸರ್ಕಾರ ಉತ್ತೇಜನ ಮಾಡಬೇಕಾದರೆ ಏನು ಮಾಡಬೇಕು? ನಾನು ಹೇಳಿದೆ, ಸರ್ಕಾರ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಿಲ್ಲ. ಉಡುಪಿಯಲ್ಲಿ ಒಂದು ವರ್ಷದ ಹಿಂದೆ ಐ.ಟಿ. ಸೆಮಿನಾರನ್ನೂ ಮಾಡಿದ್ದೇವೆ. ಹಾಗಾಗಿ, ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತದೆ. ತಾವು ಹೇಳಿದಿರಲ್ಲಾ, ಅಲ್ಲಿ ಬುದ್ಧಿಜೀವಿ ಜನ ಇದ್ದಾರೆ, ಒಳ್ಳೆಯ ಮಾನವ ಸಂಪನ್ಮೂಲ ಇದೆ. ಅವರು ಮುಂದೆ ಬಂದು ಉದ್ದಿಮೆಗಳನ್ನು ಮಾಡಬೇಕು. ಆದರೇನೂ ದೊಡ್ಡ ಕೈಗಾರಿಕೆಗಳನ್ನು ಮಾಡಬೇಕೆಂದಿಲ್ಲ. ಸಣ್ಣ ಸಣ್ಣ ಕೈಗಾರಿಕೆಗಳನ್ನೂ ಮಾಡಬಹುದು. ಉಡುಪಿ ಜಿಲ್ಲೆಯ ಮಣಿಪಾಲ್‌ನಲ್ಲಿ ಕೈಗಾರಿಕೆಗಳು ಬಂದಿವೆ. ಅಲ್ಲಿ ಕಾಲ್ ಸೆಂಟರುಗಳು ಪ್ರಾರಂಭವಾಗಿವೆ. ಅದೇ ಪ್ರಕಾರ ಬೇರೆ ಭಾಗದಲ್ಲಿ ಮಾನವ ಸಂಪನ್ಮೂಲಗಳು ಇವೆ, ಜನ ಮುಂದೆ ಬಂದರೆ, ಸರ್ಕಾರ ಉತ್ತೇಜನ ಕೊಡುತ್ತದೆ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲ್ಯಾಂಡ್ ಕನ್‌ವರ್ಷನ್‌ಗೆ ಹೋದರೆ, ಕನ್‌ವರ್ಷನ್ ಆಗುತ್ತಾ ಇಲ್ಲ. ಹೀಗಾದರೆ, ಅವರು ಉದ್ಯಮ ಮಾಡುವುದು ಹೇಗೆ?

ಶ್ರೀ ವಿಜಯಕುಮಾರ್ ಶೆಟ್ಟಿ : ಉಪಾಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಹೊಸ ಹೊಸ ಉದ್ದಿಮೆಗಳು ಬರುತ್ತಾ ಇವೆ. ಸ್ಪೆಷಲ್ ಎಕನಾಮಿಕ್ ಜೋನ್ ತರುತ್ತಾ ಇರುವುದು ಅತ್ಯಂತ ಸ್ವಾಗತಾರ್ಹವಾದುದು. ಏನಾಗಿದೆಯೆಂದರೆ, ಸ್ಥಳೀಯರಿಗೆ ಉದ್ಯೋಗದ ಅವಕಾಶವೇ ಇಲ್ಲದಂತಾಗಿದೆ. ಸ್ಥಳೀಯರು ಎಂದು ಹೇಳಿದರೆ, ಕೆಲಸವನ್ನೇ ಕೊಡುತ್ತಾ ಇಲ್ಲ. ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸಬೇಕೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಅದು ಒಳ್ಳೆಯ ವಿಷಯ. ಆದರೆ, ಎಂ.ಆರ್.ಪಿ.ಎಲ್ ಎಂಬ ದೊಡ್ಡ ಸಂಸ್ಥೆ ಬಂದಿದೆ, ಅದರಲ್ಲಿ ಸ್ಥಳೀಯರಿಗೆ ಕೆಲಸವನ್ನೇ ಕೊಡುತ್ತಾ ಇಲ್ಲ. ಬಿಹಾರದಿಂದ, ಉತ್ತರ ಪ್ರದೇಶದಿಂದ ಜನ ತಂದು ಇಲ್ಲಿ ಕೆಲಸಕ್ಕೆ ಇಡುತ್ತಿದ್ದಾರೆ. ಹಾಗಾದರೆ, ಸ್ಥಳೀಯರು ಎಲ್ಲಿ ಹೋಗಬೇಕು? ಜಾಗ ಬಿಟ್ಟುಕೊಟ್ಟಿರುವವರು ಅನೇಕ ಮಂದಿ ಇದ್ದಾರೆ. ಈ ರೀತಿ ನಿರ್ವಸಿತರಾದವರಿಗೇ ಕೆಲಸ ಕೊಡುತ್ತಾ ಇಲ್ಲ. ಏನೋ ಸ್ವಲ್ಪ ಪರಿಹಾರ ಕೊಟ್ಟು ಅವರನ್ನು ಬಾಯಿಮುಚ್ಚಿಸುತ್ತಿದ್ದಾರೆ. ಹೆಚ್ಚು ಕಡಿಮೆ ಮಾತನಾಡಿದರೆ, ನಮ್ಮವು ಪ್ರೈವೇಟ್ ಉದ್ದಿಮೆಗಳು, ಇದರಲ್ಲಿ ಸರ್ಕಾರಕ್ಕೇನೂ ಹಕ್ಕಿಲ್ಲವೆಂದು ಹೇಳುತ್ತಾರೆ. ಇಂತಹ ಉದ್ದಿಮೆಗಳಿಗೆ ನಾವು ಯಾವತ್ತೂ ವಿರೋಧ ಮಾಡುತ್ತಾ ಇಲ್ಲ. ಆದರೆ, ಈ ಉದ್ದಿಮೆಗಳಿಗೆ ಸರ್ಕಾರ ನೀತಿ ನಿಯಮವನ್ನು ಮಾಡಬೇಕು. ಸ್ಥಳೀಯರಿಗೆ, ಜಿಲ್ಲೆಯವರಿಗೆ ಇಷ್ಟು ಕೊಡಬೇಕು, ಕರ್ನಾಟಕದವರಿಗೆ ಇಷ್ಟು ಕೊಡಬೇಕು. ಕಮ್ಮಿ ಎಂದರೂ 75 ಪರ್ಸೆಂಟ್ ಸ್ಥಳೀಯರಿಗೆ, ಜಿಲ್ಲೆಯವರಿಗೆ ಮತ್ತು ಕರ್ನಾಟಕದವರಿಗೆ ಕೊಡಬೇಕು.

ಇಂಥ ಉದ್ದಿಮೆಗಳಿಗೆ ಸರಕಾರದವರು ಒಂದು ನೀತಿನಿಯಮಗಳನ್ನು ಮಾಡಬೇಕು. ಉದ್ಯೋಗವನ್ನು ಸ್ಥಳೀಯರಿಗೆ, ಆಯಾಯ ಜಿಲ್ಲೆಯವರಿಗೆ, ಕರ್ನಾಟಕ ರಾಜ್ಯದವರಿಗೆ ಇಷ್ಟು ಪ್ರಮಾಣದಲ್ಲಿ ಕೊಡಬೇಕು. ವಿಶೇಷತಃ ರಾಜ್ಯದ ಈ ಜನರನ್ನು ಪರಿಗಣಿಸಿ ಅವರಿಗೆ 75 ಪರ್‌ಸೆಂಟ್‌ನಷ್ಟಾದರೂ ಉದ್ಯೋಗವನ್ನು ಮೀಸಲು ಕೊಡಬೇಕು. ಇಂಥ ಒಂದು ನೀತಿಯನ್ನು ಸರಕಾರದವರು ಹೊಸತಾಗಿ ತಮ್ಮ ಇಂಡಸ್ಟ್ರೀಯಲ್ ಪಾಲಿಸಿಯಲ್ಲಿ ಅಳವಡಿಸಬೇಕೆಂದು ನಾನು ಮಾನ್ಯ ಮಂತ್ರಿಯವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮಧ್ಯಮ ಕೈಗಾರಿಕಾ ಸಚಿವರು) : ಮಾನ್ಯ ಗೌರವಾನ್ವಿತ ಸದಸ್ಯರಿಗೂ ಗೊತ್ತು. ಅವರು ತಂದ ಇಂತಹ ಹಲವಾರು ಸಮಸ್ಯೆಗಳನ್ನು ಬಗೆಹರಿಸಿಕೊಟ್ಟಿದ್ದೇನೆ. ಇವರು ಕಡ್ಡಾಯವಾಗಿ ಸ್ಥಳೀಯರನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ. ಉದಾಹರಣೆಗೆ ಬೆಳಗಾವಿಯಲ್ಲಿ ಒಂದು ಕೈಗಾರಿಕೆಯಾದರೆ ಅಲ್ಲಿಯವರನ್ನೇ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಅಲ್ಲಿ ಕರ್ನಾಟಕದ ಜನ, ಕನ್ನಡದ ಜನರನ್ನು ತೆಗೆದುಕೊಳ್ಳಬೇಕೆಂದು ಇರುತ್ತದೆ. ಆ ದೃಷ್ಟಿಯಿಂದ ನೀತಿನಿಯಮಗಳನ್ನು ತರಬೇಕೆಂದಿದ್ದೇವೆ. ಅಷ್ಟೇ ಅಲ್ಲ, ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಯವರು, ರಾಜ್ಯಮಟ್ಟದಲ್ಲಿ ಕಮಿಶನರ್‌ರವರು, ರಿವ್ಯೂ, ಮಾಡಬೇಕೆಂದು ಆದೇಶವನ್ನು ಕೊಟ್ಟಿದ್ದೇವೆ. ಹಾಗೆಂದು ಎಲ್ಲ ಡಿ.ಸಿ.ಗಳವರಿಗೆ ಪತ್ರವನ್ನು ಬರೆದಿದ್ದೇನೆ. ಕನ್ನಡಿಗರಿಗೆ ಕಡ್ಡಾಯವಾಗಿ ಸರೋಜಿನಿ ಮಹಿಷಿ ವರದಿಯ ಪ್ರಕಾರ, ಉದ್ಯೋಗಾವಕಾಶವನ್ನು ಕೊಡಬೇಕು. ಒಂದು ವೇಳೆ ಇವರು, ಹೇಳಿದ ಹಾಗೆ, ಎಂಆರ್‌ಪಿಎಲ್‌ನಲ್ಲಿ ಪುನರ್‌ವಸತಿಯನ್ನು, ಉದ್ಯೋಗಾವಕಾಶವನ್ನು ಸಾಕಷ್ಟು ಒದಗಿಸಿಕೊಟ್ಟಿದ್ದೇವೆ. ಒಂದು ವೇಳೆ ಏನಾದರೂ ಲೋಪದೋಷಗಳು ಇದ್ದರೆ ಅದನ್ನು ನಮ್ಮ ಗಮನಕ್ಕೆ ತರಲಿ ಅವುಗಳನ್ನು ಸುಧಾರಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ಆ ಕಾರ್ಖಾನೆಗಳವರು ಯಾವುದೇ ಸರಕಾರದ ಆದೇಶಕ್ಕೆ ಬದ್ದರಲ್ಲ. ಅವರದೇ ಆದ ಒಂದು ರೀತಿನೀತಿಗಳ ಪ್ರಕಾರ ಅವರು ಉದ್ಯೋಗ ವ್ಯವಸ್ಥೆಯನ್ನು ಮಾಡುತ್ತಾ ಇದ್ದಾರೆ. ಈ ಬೃಹತ್ ಉದ್ದಿಮೆಗಳು ನಮ್ಮಲ್ಲಿ ಯಾವುವು ಬರುತ್ತಿವೆ, ಅವರು ಸರಕಾರದವರು ಈ ಕುರಿತಾಗಿ ಕೊಟ್ಟ ಯಾವುದೇ ಆದೇಶಗಳನ್ನು ಅನುಷ್ಠಾನಕ್ಕೆ ತರುತ್ತಾ ಇಲ್ಲ. ಬಹುಶಃ ಬಾಕಿ ಇರುವಂಥ ನಮ್ಮ water augmentation charges ಮತ್ತು ಇತರ ಹಲವು ಕೋಟಿ ರೂಪಾಯಿಗಳು ಇನ್ನೂ ಎಂಆರ್‌ಪಿಎಲ್ ಬಿಎಸ್‌ಎಫ್ ಮುಂತಾದವುಗಳಿಂದ ಬಾಕಿ ಇವೆ. ಇವೊತ್ತಿಗೂ ಅದು ಬಂದಿಲ್ಲ. ಆದ್ದರಿಂದ ತಮ್ಮ ಆದೇಶಗಳ ಅನುಷ್ಠಾನದ ನಿಟ್ಟಿನಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದು ಒಂದು ವಿಚಾರ. ಎರಡನೆಯದಾಗಿ ವಿಶೇಷ ಆರ್ಥಿಕವಲಯಕ್ಕೆ ಸಂಬಂಧಪಟ್ಟ ಹಾಗೆ, ಯಾವ ಕ್ರಿಯಾ ಯೋಜನೆಗಳನ್ನು ಎಷ್ಟು ಸರ್ವೀಸ್ ಸೆಂಟರ್‌ಗಳನ್ನು ತೆರೆಯುವ ಯೋಜನೆಗಳನ್ನು ತಾವು ಹಾಕಿಕೊಂಡಿದ್ದೀರಿ ಎಂಬುದನ್ನು ತಾವುಗಳು ಹೇಳಬೇಕು. ಹಾಗೆಯೇ ಇನ್‌ವೆಸ್ಟ್‌ರ್‌ಗಳನ್ನು ಆಕರ್ಷಣೆ ಮಾಡುವ ದಿಕ್ಕಿನಲ್ಲಿ ಇದನ್ನು ಅಭಿವೃದ್ಧಿ ಮಾಡುವ ಬಗ್ಗೆ ಏನು ಕ್ರಮವನ್ನು ಕೈಗೊಳ್ಳುತ್ತಾ ಇದ್ದೀರಿ?

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ನಮ್ಮ ಹೊಸ ಕೈಗಾರಿಕಾ ನೀತಿಯು ಬಹಳ ಸ್ಪಷ್ಟವಾಗಿ ಇದೆ. ಕನ್‌ಸೆಶನ್ಸ್ ಯಾವುವೂ ಇಲ್ಲ. ಕೇಂದ್ರ ಮಟ್ಟದಲ್ಲಿ ಒಂದು ಒಪ್ಪಂದವಾಗಿದೆ. ಯಾವ ರಾಜ್ಯ ಸರಕಾರವೂ ಯಾವುದೇ ರಿಯಾಯಿತಿಯನ್ನು ಕೊಡಬಾರದು. ಹಾಗಾಗಿ ಸೇಲ್ಸ್ ಟ್ಯಾಕ್ಸ್ ಇಲ್ಲ. ಒಂದನೇ ತಾರೀಖಿನಿಂದ ಸ್ಟ್ಯಾಂಪ್‌ಡ್ಯೂಟಿಯೂ ಇಲ್ಲ. ಒಂದು ಕನ್‌ಸೆಶನ್ ಉಳಿದಿದೆ, ಅದು ಎಂಟ್ರಿ ಟ್ಯಾಕ್ಸ್. There are no other concessions. export oriented ಇದ್ದರೆ raw material ಏನು procure ಮಾಡುತ್ತಾರೆ ಅದರ ಮೇಲೆ ಟ್ಯಾಕ್ಸ್ ಕನ್‌ಸೆಶನ್. These are the concessions at the national level ಎರಡನೆಯದು ಹೊಸಕೈಗಾರಿಕಾ ನೀತಿಯಲ್ಲಿ upgradation of technology ಮೂಲಭೂತ ಸೌಕರ್ಯ, ಇವುಗಳನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ನಿಮ್ಮ ಪೋರ್ಟ್ ರೋಡ್‌ಗೆ ಹಣವನ್ನು ಕೊಟ್ಟಿದ್ದೇವೆ. ಮೂಲಭೂತ ಸೌಕರ್ಯಗಳನ್ನು ಬೆಳವಣಿಗೆ ಮಾಡಲಿಕ್ಕೆ. ವಿಶೇಷವಾಗಿ Special Economic Zone ಕರಾವಳಿಗಳಲ್ಲಿ ಆಗಬೇಕೆಂಬ ಪ್ರಯತ್ನಗಳು ನಡೆದಿವೆ. ಈಗಾಗಲೇ ಕೇಂದ್ರ ಸರಕಾರಕ್ಕೆ ನಾವು ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಅದಕ್ಕೆ: principle approval ಬಂದರೆ immediately lands identify ಮಾಡಿದ್ದೇವೆ, ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಮೂರನೆಯದಾಗಿ, ಎಂಆರ್‌ಪಿಎಲ್ ಅಥವಾ ಬಿಎಸ್‌ಎಫ್ ರವರು ಒಂದು ವೇಳೆ ನಮ್ಮ development authority ಗೆ ಬಾಕಿ ಕೊಡುವುದು ಇದ್ದರೆ, ಸಂಬಂಧಪಟ್ಟ ಇಲಾಖೆಗಳು ವಸೂಲಾತಿಗೆ ಕ್ರಮಕೈಗೊಳ್ಳಬೇಕೇ ವಿನಹ ನಾವು ನಮ್ಮ ಇಲಾಖೆಯಿಂದ ವಸೂಲು ಮಾಡಬಾರದೆಂದು ಯಾವ ಆದೇಶವನ್ನೂ ಕೊಟ್ಟಿಲ್ಲ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಪಡುಬಿದ್ರೆಯಲ್ಲಿ ಸ್ಪೆಶಲ್ ಎಕನಮಿಕಲ್ ಜೋನ್ ಬರುತ್ತದೆ ಎಂದು ಹೇಳಿದ್ದೀರಿ. ಈ ಹಿಂದೆ ಜೈನಾ ಲೈಟ್ ಅಂಡ್‌ಪವರ್ ಕಂಪನಿ ಬರುತ್ತದೆ, ನಾಗಾರ್ಜುನ ಪವರ್ ಕಂಪನಿ ಬರುತ್ತದೆ ಎಂದು ಇತ್ತು ಅದರ ಪರಿಸ್ಥಿತಿ ಏನಾಯಿತು ಎಂಬುದನ್ನು ತಾವುಗಳು ಹೇಳಬೇಕು. ಏಕೆಂದರೆ ತಮ್ಮ ಪಟ್ಟಿಯಲ್ಲಿ ಆ ಹೆಸರುಗಳನ್ನು ಕೊಟ್ಟಿಲ್ಲ. ಅಂಥ ಬೃಹತ್

ಕೈಗಾರಿಕೆಗಳು ಬರುತ್ತವೋ ಇಲ್ಲವೋ, ಹಾಗೆಯೇ ಸ್ಪೆಶಲ್ ಎಕಾನಮಿಕ್ ಜೋನ್ ಅದೇ ಜಾಗದಲ್ಲಿ ಬರುತ್ತದೋ ಅಥವ ಬೇರೆ ಯಾವುದಾದರೂ ಜಾಗದಲ್ಲಿ ಬರುತ್ತದೋ ಎಂಬುದನ್ನು ತಿಳಿಸಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಕೊಜೆಂಟ್ರಿಕ್ಸ್, to the best of my knowledge, they have gone. ಕೊಜೆಂಟ್ರಿಕ್ಸ್ ಬರುವ ಪ್ರಶ್ನೆಯೇ ಇಲ್ಲ. ನಾಗಾರ್ಜುನ ಸ್ಟೀಲ್ ಪ್ಲ್ಯಾಂಟ್ ಬರುವುದಿಲ್ಲ. ನಾಗಾರ್ಜುನ ಪವರ್‌ಪ್ಲಾಂಟ್ ಬಗ್ಗೆ, ಅದು ಸರಕಾರದ ಮುಂದೆ ಪರಿಶೀಲನೆಯಲ್ಲಿದೆ. ಅದು ಯಾವ ಪ್ರಕಾರ ಬೆಳೆಯುತ್ತದೆ, because it will depend upon the promoters also ಯಾವ ಪ್ರಕಾರ ಅವರು ರಿಸೋರ್ಸ್‌ಸ್ ಬಿಲ್ಟ್ ಮಾಡುತ್ತಾರೆ, but the proposal is before the Government ಆದರೆ ಪಡುಬಿದಿರೆಯಲ್ಲಿ ಕೊಜೆಂಟ್ರಿಕ್ಸ್ ಏನು ಬರಬೇಕಾಗಿತ್ತು ಆ ಜಾಗದಲ್ಲಿ ಸ್ಪೆಶಲ್ ಎಕಾನಮಿಕ್ ಜೋನ್‌ನನ್ನು ಪ್ರಾರಂಭ ಮಾಡಲು ಪ್ರಯತ್ನ ಮಾಡುತ್ತೇವೆ.

ಪ್ರಶ್ನೆ ಸಂಖ್ಯೆ 391(3453)

ಉಪಾಧ್ಯಕ್ಷರು : ಮಾನ್ಯ ಪಾಟೀಲ್‌ರವರೆ, ತಮ್ಮ ಪ್ರಶ್ನೆಗೆ ಉತ್ತರವು ಇನ್ನೂ ಬಂದಿಲ್ಲ. ಬಹುಶಃ ಪ್ರಶ್ನೆ ತಡವಾಗಿ ಬಂದಿದೆ, ಅದಕ್ಕೆ ಉತ್ತರವನ್ನೂ ತಡವಾಗಿ ಕೊಡುತ್ತಾರೆ.

ಶ್ರೀ ಎಸ್.ಎಸ್ ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಉತ್ತರ ಏಕೆ ಬಂದಿಲ್ಲ? ಮಾನ್ಯ ಮಂತ್ರಿಗಳೂ ಇಲ್ಲಿದ್ದಾರೆ. ಈ ಪ್ರಶ್ನೆಗೆ ಅನ್‌ಸ್ಟಾರ್ಡ್‌ನಲ್ಲಿ ಉತ್ತರ ಬಂದಿದೆ. ಈ ಪ್ರಶ್ನೆಯಲ್ಲಿ ಏನಿದೆ? ಉತ್ತರ ಕಳುಹಿಸದಿರಲು ಕಾರಣವಾದರೂ ಏನು ಎಂದು ಕೇಳಿ?

ಉಪಾಧ್ಯಕ್ಷರು : ನಿಮ್ಮ ಪ್ರಶ್ನೆ ತಡವಾಗಿ ಬಂದಿದೆ, ಉತ್ತರವನ್ನು ತಡವಾಗಿ ಕೊಡುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಪ್ರಶ್ನೆ ತಡವಾಗಿ ಬಂದಿದೆ ಅಂದರೆ ಅದರ ಅರ್ಥವೇನು? ಅಧ್ಯಕ್ಷರೆ? ಪ್ರಶ್ನೆಯನ್ನು ಸರಿಯಾದ ಸಮಯದಲ್ಲಿಯೇ ಕೊಡುತ್ತೇವಲ್ಲವೇ?

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಸಚಿವರು ಅದಕ್ಕೆ ಇಲ್ಲಿಯೇ ಉತ್ತರವನ್ನು ಕೊಡಬಹುದು. ಅದರಲ್ಲಿ ಮಹತ್ತರವಾದುದೇನೂ ಇಲ್ಲ. ಅವರು ಉತ್ತರಿಸಲು ಸಮರ್ಥಮಂತ್ರಿಗಳು. ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಲು ಏನಿದೆ ಎಂಬುದನ್ನು ತಾವೇ ಹೇಳಿ.

ಉಪಾಧ್ಯಕ್ಷರು : ಅವರ ಹತ್ತಿರ ಉತ್ತರವಿದ್ದರೆ ಹೇಳುತ್ತಾ ಇದ್ದರು. ಸುಮ್ಮನೆ ಕುಳಿತಿದ್ದಾರೆ ಅಂದರೆ ಈಗ ಅವರ ಹತ್ತಿರ ಉತ್ತರ ಇಲ್ಲವೆಂಬುದು ಅರ್ಥವಾಗುತ್ತದೆ.

ಶ್ರೀ ಎಂ. ಮಹದೇವ (ಪಶುಸಂಗೋಪನ ಮತ್ತು ಸಕ್ಕರೆ ಸಚಿವರು) : ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ಬಹಳ ಚೆನ್ನಾಗಿ ಕೊಟ್ಟಿದ್ದೇವೆ. ಅಲ್ಲಿಗೆ ಸುಮಾರು ಆರುಗಂಟೆಗೆ ತಲುಪಿಸುವಾಗ ಸ್ವಲ್ಪ ಲೇಟ್ ಆಯಿತು ಹಾಗಾಗಿ ಅಡ್ಮಿಟ್ ಆಗುವುದು ಕಷ್ಟವಾಯಿತು. ಹಾಗಾಗಿ ಮುಂದಕ್ಕೆ ಹಾಕಬೇಕಾಯಿತು.

ಉಪಾಧ್ಯಕ್ಷರು : ತಮ್ಮ ಪ್ರಶ್ನೆಯನ್ನು ಮುಂದಕ್ಕೆ ತೆಗೆದುಕೊಳ್ಳೋಣ.

ಬೆಂಗಳೂರಿನಲ್ಲಿ ಈರೋಡಿನ ಹಾಲು ಮಾರಾಟವಾಗುತ್ತಿರುವುದು

392 (3893) : ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಇತ್ತೀಚೆಗೆ ಅವ್ಯಾಹತವಾಗಿ ಈರೋಡ್ ಹಾಲು ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;